Regd No M 1299 Sri ಶಾ 5—10—51

SATYAVADI = 35th Year

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೇದಾರ್ ಎ೦. ಏ. ಸುಬ್ರಾಯರು [ಬಿಡಿ ಪ್ರತಿ 3 ಪೆ

ನ ಮ್ಮ ಕ ರ್ತ ವ್ಯ

— ೨ —

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಬೆರೆತು ತ್ಯಾಗಮೂರ್ತಿಗಳೆಂದು ಮೆರೆದು ಜನತೆಯ ಮುಂದಾಳುಗಳಾಗಿ ನಿಂತು ಹಿಂದಿನ ಅಡಳಿತವನ್ನು ಜರಿದು ಸ್ವರ್ಗ ಸಾಮ್ರಾಜ್ಯ ಸುಖವನ್ನೇ ತಂದುಕೊಡುತ್ತೇವೆಂದು ಸಾರಿದ ! ಜನಗಳ ಅಡಳಿತದಲ್ಲಿ ಜನಗಳು ಸರ್ವ ವಿಧದದಲ್ಲಿಯೂ ನರಕಯಾತನೆಯನ್ನು ಅನುಭವಿಸುತ್ತಿರುವುದು ಸರ್ವ ಸಾಮಾನ್ಯವಾಗಿದೆ ' ಅವರು ಬೇಡ. ಬೇರೆ ಪಕ್ಷದವರನ್ನು ಚುನಾಯಿಸೋಣ ' ಅನ್ನಬಹುದು. ಅದೂ ಸುಖವಿಲ್ಲ. ಪಕ್ಷವೆಂದು ಹೇಳಿದರೆ ಅದು ಕೆಲವು ಜನಗಳ ಕೂಟ. ಆ ಕೂಟದಲ್ಲಿ ಒಬ್ಬಿಬ್ಬರು ಮಾತ್ರ ಉತ್ತಮರಿರುತ್ತಾರೆ ಉಳಿದವರೆಲ್ಲರೂ ದುರ್ಜನರು ಯೋಗ್ಯರಾದ ಪಕ್ಷದ ಮುಖಂಡರ ಅಶ್ರಯದಲ್ಲಿ, ಮುಖಂಡರ ಪ್ರಭಾವದಿಂದ ಸ್ವಾರ್ಥಿಗಳು ಜಯಗಳಿಸಿ ಕೊನೆಗೆ ಪಕ್ಷದ ಉದ್ದೇಶಗಳನ್ನೇ ಮರೆತು ತಮ್ಮ ಸ್ವಾರ್ಥಕ್ಕಾಗಿ ಲೋಕಪೀಡಿತರಾಗುತ್ತಾರೆ ಮೇಲಾಗಿ ಅಭಿನವ ದಧೀಚಿಗಳಾದ ಕಾಂಗ್ರೆಸಿನವರು ಹಾಕಿಕೊಟ್ಟ ಮೇಲ್ಪಂಕ್ತಿಯು ಎಲ್ಲರಿಗೂ ಮನಸಟ್ಟಾಗಿರುವದರಿಂದ ಯಾವ ಪಕ್ಷವಾದರೂ ಅದೇ ದಾರಿಯಲ್ಲಿ ನಡೆಯುತ್ತದೆ. ಆದುದರಿಂದ ಯಾವುದೇ ಸಂಘಟಿತ ಪಕ್ಷಕ್ಕಾದರೂ ಚುನಾವಣೆಯಲ್ಲಿ ಓಟು ಕೊಡುವುದರಿಂದ ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ ಇದನ್ನು ಪ್ರತಿಯೊಬ್ಬರೂ ಮನನ ಮಾಡುತ್ತಿರಬೇಕು.

ಜನಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಚುನಾವಣೆಗೆ ನಿಂತಿರುವವರ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಅವರ ಹಿಂದಿನ ಚರಿತ್ರೆ, ಸ್ವಭಾವ ಗುಣ ಇತ್ಯಾದಿಗಳನ್ನು ನೋಡಿ ಅವರು ನಿಜವಾಗಿಯೂ ಯೋಗ್ಯರೆಂದು ಕಂಡು ಬಂದರೆ, ಅವರಿಂದ ದೇಶಕ್ಕೆ, ನಿಮ್ಮ ಕ್ಷೇತ್ರಕ್ಕೆ ಸಹಾಯವಾಗಬಹುದೆಂದು ನಿಮಗೆ ಖಾತರಿ ಇರುವವರನ್ನೇ ಓಟುಕೊಟ್ಟು ಚುನಾಯಿಸಬೇಕು ಇದೇ ಪ್ರಜೆಗಳಾದ ನಮ್ಮ ಕರ್ತವ್ಯ

— " ಸತ್ಯವಾದಿ " ಯ ಸ್ಥಾಪಕರ ಜ್ಞಾಪಕಾರ್ಥ —

ಮೈಸೂರು ಅರಮನೆ ಸಿರಸ್ತೇದಾರರಾಗಿದ್ದ ದಿವಂಗತ ಎಂ. ಏ. ಸುಬ್ಬರಾಜರು ' ಸತ್ಯವಾದಿ ' ಪತ್ರಿಕೆಯನ್ನು 1917 ನೇ ಇಸ್ವಿಯಲ್ಲಿ ಸ್ಥಾಪಿಸಿ, ಸತತ ಮೂವತ್ತೈದು ವರ್ಷ ಯಶಸ್ವಿಯಾಗಿ ನಡೆಸಿ, 1930 ನೇ ಇಸವಿಯಲ್ಲಿ ಈ ಪತ್ರಿಕಾ ಸಂರಕ್ಷಣ ಭಾರವನ್ನು ನಮ್ಮ ಮೇಲೆ ಬಿಟ್ಟು ಪರಂಧಾಮವನ್ನು ಸೇರಿದರು. ಆ ಪವಿತ್ರಾತ್ಮರು ಶಿವಸಾಯುಜ್ಯವನ್ನು ಸೇರಿದ ಪುಣ್ಯ ದಿನ ನಾಳೆಯಾದುದರಿಂದ ಅವರ ಜ್ಞಾಪಕಾರ್ಥವಾಗಿ ನಾಳೆಯ ದಿನ ' ಸತ್ಯವಾದಿ ' ಕಾರ್ಯಾಲಯಕ್ಕೆ ರಜಾ ಕೊಟ್ಟಿದೆ

ಭಾರತ ರೇಡಿಯೋವನ್ನು, ರಾಜ್ಯಭಾರ ಮಾಡುತ್ತಿರುವ ಕಾಂಗ್ರೆಸ್ ಸ್ವಪ್ರಚಾರಕ್ಕೆ ಬಳಸಿಕೊಳ್ಳಬಾರದೆಂಬುದು ಅತ್ಯಂತ ಖಂಡನೀಯ ಎಂದು ಜನಸಂಘದ ಸಭೆಯೊಂದರಲ್ಲಿ ಮೊನ್ನೆ ಡಾ| ಮುಖರ್ಜಿ ದಿಲ್ಲಿ ಜನರ ಮುಂದೆ ಹೇಳಿದ್ದಾರೆ.

ಅಮೇರಿಕದ ರಹಸ್ಯವೆಲ್ಲಾ ಶತ್ರುವಿಗೆ ತಿಳಿಯಿತು

ಅಧ್ಯಕ್ಷ ಟ್ರೂಮನ್ ನಿನ್ನೆ ವಾಷಿಂಗ್ಟನ್ನಿನಲ್ಲಿ ನಡೆಸಿದ ಪತ್ರಿಕಾ ಸಂಮೇಳನದಲ್ಲಿ ಪತ್ರಿಕೆಗಳಿಂದ ಶೇ 95 ರಷ್ಟು ರಹಸ್ಯಗಳು ಶತ್ರುಗಳಿಗೆ ತಿಳಿಯಿತೆಂದು ತಿಳಿಸಿ ಆ ಬಗೆಗೆ ರಕ್ಷಣೆ ಮಾಡಲು ಕೋರಿದ್ದಾರೆ

ಅಂಗೀಕಾರ

ಭಾರತ ಪಾರ್ಲಿಮೆಂಟ್ ಪತ್ರಿಕಾ ಮಸೂದೆಯನ್ನು ಮೊನ್ನೆ ಅಂಗೀಕರಿಸಿತು ರಾಜಾಜಿ, ದಿವಾಕರರು ಈ ಮಸೂದೆ ಅಗತ್ಯವೆಂದರು. ಡಾ| ಮುಖರ್ಜಿ, ಕುಂಜ್ರು ಮಸೂದೆಯನ್ನು ತೀವ್ರ ಪ್ರತಿಭಟಿಸಿದರು.

ಪಾಕ್" ಬಿಟ್ಟಿರು

ಚಿತ್ರಾಲ್ ರಾಜಕುಮಾರ ಪಾಕಿಸ್ತಾನದಿಂದ ತಪ್ಪಿಸಿಕೊಂಡು ಅಫ್ಘಾನಿಸ್ತಾನದ ಆಶ್ರಯಪಡೆದರೆಂದು ದೆಹಲಿ ವಾರ್ತೆ ಫಕ್ತೂನಿಸ್ತಾನಕ್ಕೆ ಅವರ ಬೆಂಬಲವಿದೆ

ರೈಲು ಬೇಕು

ಚಿಕ್ಕಮಗಳೂರು ಗ್ರಾಮಾಭಿವೃದ್ಧಿ ಸಂಮೇಳನ ಕಡೂರು-ಚಿಕ್ಕಮಗಳೂರಿಗೆ ರೈಲ್ವೆ ಏರ್ಪಾಟು ಬೇಕೆಂದು ನಿರ್ಣಯ ಮಾಡಿದೆ.

ಸರ್ಕಾರಿ ಪ್ರಕಟಣೆ

ಈ ವರ್ಷ ವ್ಯವಸಾಯ ಕಾಲದಲ್ಲಿ ಮಧ್ಯೆ 2 ತಿಂಗಳು ಮಳೆ ಅಭಾವದಿಂದ ಹೊಲದ ಬೆಳೆ ತುಂಬಾ ನಷ್ಟಗೊಂಡಿರುವುದರಿಂದ ಅಂತರ ಜಿಲ್ಲೆಗಳಲ್ಲಿ . ಅಹಾರ ಧಾನ್ಯ ಸಾಗಾಣಿಕೆಗೆ ಸರ್ಕಾರದವರು ಅಪ್ಪಣೆ ಇತ್ತಿರುವ ಸಂಬಂಧದ ಪತ್ರಿಕಾ ಪ್ರಕಟಣೆ ಪ್ರಕಟವಾಗಿದೆ.

ಅರ್ಧ ಆದರೂ ಗಿಟ್ಟಿಸಬೇಕು

ಮಹಿಳೆಯರು ತಮ್ಮ ಜನಸಂಖ್ಯೆಗೆ ತಕ್ಕಂತೆ ಕೊನೆ ಪಕ್ಷ ಅರ್ಧದಷ್ಟು ಸ್ಥಳಗಳನ್ನಾದರೂ ಶಾಸನ ಮಂಡಲದಲ್ಲಿ ಗಳಿಸಬೇಕೆಂದು ಅಹಮದಾಬಾದಿನಲ್ಲಿ ಹಂಸ ಮೆಹತ ತಿಳಿಸಿದ್ದಾರೆ

ಸರ್ಕಾರಕ್ಕೆ ನಷ್ಟ ಆಗುತ್ತಿದೆ

ಅಮೇರಿಕದಿಂದ ಭಾರತ ಇಪ್ಪತ್ತು ಲಕ್ಷ ಟನ್ನು ಗೋಧಿಯನ್ನು ಸಾಲವಾಗಿ ಕೊಂಡಿದೆಯಷ್ಟೆ. ಸರ್ಕಾರಕ್ಕೆ ಮಣ 1 ಕ್ಕೆ ರೂ 22 ರಂತೆ ಖರೀದಿಬಿದ್ದಿದೆ. ಆದರೆ ಸರ್ಕಾರ ಜನರಿಗೆ ಮಣ 1 ಕ್ಕೆ ರೂ. 16-17 ರಂತೆ ಮಾರಾಟ ಮಾಡುತ್ತಿದೆ ಈ ಗೋಧಿ ವ್ಯಾಪಾರದಲ್ಲಿ ಸರ್ಕಾರಕ್ಕೆ ತಗಲುವ ಒಟ್ಟು ನಷ್ಟ ರೂ. 25 ಕೋಟಿ ಈ ಅಂಶವನ್ನು ಭಾರತ ಹಣಕಾಸಿನ ಸಚಿವರು ಭಾರತ ಪಾರ್ಲಿಮೆಂಟನಲ್ಲಿ ವ್ಯಕ್ತಪಡಿಸಿದ್ದಾರೆ.

ಇನ್ನೊಂದು ವಾರದಲ್ಲಿ ಗೊತ್ತಾಗಿದೆ

ಮಹಾ ಚುನಾವಣೆಗೆ ಮೈಸೂರಿನಲ್ಲಿ ಕಾಂಗ್ರೆಸ್ ಉಮೇದುವಾರರು ಯಾರ್ಯಾರು ಎಂಬುದು ಇನ್ನೊಂದು ವಾರದಲ್ಲಿ ಪ್ರಕಟವಾಗುವದು.

ಯುವಕರ ಬಂಧನ

ಮಹಾತ್ಮ ಗಾಂಧೀಜೀಯವರ ವರ್ಧಂತ್ಯುತ್ಸವ ಸಂದರ್ಭದಲ್ಲಿ ಎಂದಿನಂತೆ ಈ ಬಾರಿ ಫ್ರೆಂಚ್ ಆಡಳಿತಕ್ಕೊಳಪಟ್ಟಿರುವ ಭಾರತದ ಸ್ವಾಸ್ಥ್ಯಗಳಲ್ಲಿ ರಜ ಕೊಡಲಿಲ್ಲ. ಈರ್ವರು ಯುವಜನರು ಮಹಾತ್ಮರ ಹುಟ್ಟು ಹಬ್ಬ ಮಾಡಿದ ಬಗೆಗೆ ಸೆರೆಮನೆಗೆ ಸೇರಿಸಲ್ಪಟ್ಟರು.

ರಫಿ ಅಹಮದ ಕಿದ್ವಾಯಿ ತಾವೋರ್ವರೇ ಕಾಂಗ್ರೆಸಿಗೆ ಸೇರುವದಾಗಿ ತಿಳಿಸಿಕೆ ಕೊಟ್ಟಿರುವದಲ್ಲದೆ, ತಮ್ಮಂಥವರೆಲ್ಲರೂ ಮತ್ತೆ ಕಾಂಗ್ರೆಸಿಗೆ ಬರಲು ಅವಕಾಶವಿದೆ ಎಂದು ಲಕ್ನೋನಲ್ಲಿ ತಿಳಿಸಿದ್ದಾರೆ. ಕಾಂಗ್ರೆಸ್ ಕಾರ್ಯಮಂಡಲಿಯನ್ನು ಪಂ|| ನೆಹರು ಪುನರ್ರಚಿಸುವರೆಂಬುದನ್ನು ಕೇಳಿಯೇ ಕಿದ್ವಾಯಿಯವರಿಗೆ ಪಮಾತೃಪ್ತಿಯಾಯಿತಂತೆ !

ಅಗತ್ಯ ಬಿದ್ದಲ್ಲಿ ಆಂಧ್ರ ಅವತರಿಸಲು ಆಚಾರ್ಯ ವಿನೋಬ ಅವರೇ ಅನ್ನ ತ್ಯಾಗ ಮಾಡುವರೆಂದು ಗುಂಟೂರಿನಿಂದ ಸುದ್ದಿ ಬಂದಿದೆ.

ಎರವಾಡ ಬಂದೀಗೃಹದಿಂದ ಮೊನ್ನೆ, ಇನ್ನೂ ದಶದಿನಗಳು ತಿಳಿಯದೆ ಅನುಭವಿಸಬೇಕಿದ್ದಾಗ್ಯೂ ನಟಿ ಬೇಗಂ ಪ್ಯಾರ ಮುಕ್ತಳಾದಳು. ರಕ್ತನಿಧಿಗೆ ಅವಳ ರಕ್ತ ಕಾಣಿಕೆ ಇತ್ತುದೆ ಈ ರಿಯಾಯಿತಿಗೆ ಕಾರಣ.

ವಾರ್ತೆಗಳು

ಇರಾನಿನ ಎಣ್ಣೆ ತಂಟೆಯಲ್ಲಿ ಬ್ರಿಟನ್ನು ಕಳಿಸಿದ ದೂತನ ಬಗ್ಗೆ ಚರ್ಚೆಯನ್ನು ಭದ್ರತಾ ಮುಂದೂಡಿಕೆಂದೂ, ಚರ್ಚೆಯು ತಾ || ೧೧ ರೊಳಗೆ ಪ್ರಾರಂಭವಾಗಲಿದ್ದು ಅದರ ದಿನವನ್ನು ಅಧ್ಯಕ್ಷರು ನಿರ್ಧರಿಸುವರೆಂದೂ ಫ್ಲಷಿಂಗ್ ಮೆಡೋ ವಾರ್ತೆ ತಿಳಿಸುತ್ತದೆ

ನವದೆಹಲಿಯಲ್ಲಿ ಚರಕಾ ಸಂಘದ ಸಭೆಯಲ್ಲಿ ಭಾಷಣ ಮಾಡುತ್ತಾ, ಭಾರತೀಯರಲ್ಲಿ ಜಾತೀಯ ವೈಮನಸ್ಸು ಹುಟ್ಟಿಸಲು ಯಾರಿಗೂ ಅವಕಾಶ ಕೊಡಲಾರೆವು. ಆದರೂ ಜಾತೀಯ ಶಕ್ತಿಗಳು ಜಾತಿಯ ಕಲಹ ಹುಟ್ಟಿಸಲು ಪ್ರಯತ್ನಿಸಿದರೆ ನಿರ್ದಾಕ್ಷಿಣ್ಯದಿಂದ ಅದನ್ನು ನಿರ್ಮೂಲ ಮಾಡಲಾಗುವುದು, ಎಂದು ಪಂ| ನೆಹರೂರವರು ತಿಳಿಸಿದರು.

ಪಾಕಿಸ್ತಾನ ಪಂಜಾಬಿನಲ್ಲಿ ಈಗ ಪ್ರಕಟಣೆ ನಿಂತುಹೋಗಿರುವ 'ನವಾ ಇವಕ್ತ್' ಪತ್ರಿಕೆಯನ್ನು ಪುನಃ ಪ್ರಾರಂಭಿಸಲು ಇನ್ನು ಹತ್ತು ದಿನಗಳೊಳಗಾಗಿ ಸರ್ಕಾರವು ಅನುಮತಿಕೊಡದಿದ್ದರೆ ಅದರ ಪ್ರತಿಭಟನಾರ್ಥವಾಗಿ ಈ ತಿಂಗಳು ೨೧ ರಿಂದ ಸಂಪನ್ಮಾರ್ಗವನ್ನು ಅವಲಂಬಿಸಲಾಗುವುದಲ್ಲದೆ ಇವುಗಳಲ್ಲಿ ಪಾಕಿಸ್ತಾನ ಸರ್ಕಾರದ ಯಾವ ಸಹಾಯವನ್ನೂ ಪತ್ರಿಕೆಗಳಲ್ಲಿ ಪ್ರಕಟಿಸಲಾಗದೆಂದೂ ಪಾಕಿಸ್ತಾನ ಸಂಪಾದಕರ ಪರಿಷತ್ತು ಪಂಜಾಬು ಸರ್ಕಾರಕ್ಕೆ ಕೊನೆಯ ಎಚ್ಚರಿಕೆ ಇತ್ತಿದೆ.

ಜಗತ್ತಿನ ಬೇರೆ ಬೇರೆ ಭಾಗಗಳಿಂದ ಕಳೆದ ತಿಂಗಳಲ್ಲಿ ಸುಮಾರು ಎರಡು ಲಕ್ಷ ಟನ್ ಆಹಾರಧಾನ್ಯ ಕಲ್ಕತ್ತಾ ಒಂದರಿಗೆ ಬಂದಿರುವುದಾಗಿ ತಿಳಿಸುಬಂದಿದೆ.

"ಗೋರಕ್ಷಣೆ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾಣಿ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3



ಶ್ರೇಷ್ಠತೆಯ
ಹೆಗ್ಗುರುತು

ITL ಗ್ರೈಪ್ ಸಿರಪ್

ಉಡ್‌ಲಾಂಡ್

ಶಿ ನ

ದಸರಾಕ್ಕೆ ಸ್ಪೆಷಲ್ ಪ್ರೋಗ್ರಾಂ

5–10–51 ರಿಂದ

ನಿರೂಪ ರಾಯ್, ತ್ರಿಲೋಕ್ ಕಪೂರ್
ಅಭಿನಯಿಸಿರುವ

ಶ್ರೀಗಣೇಶಜನ್ಮ

ಪ್ರತಿ ಸಂಸಾರವೂ ನೋಡಲೇಬೇಕಾದ
ಅಮೋಘ ಪೌರಾಣಿಕ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ಅಪೇರ—

ಜಯಪ್ರದ 2 ನೆ ವಾರ

ಸರ್ವಾಧಿಕಾರಿ

ಮಹೋನ್ನತ ತಮಿಳು ಚಿತ್ರ
ಪಾತ್ರ — ಅಂಜಲಿದೇವಿ, ನಾಗಯ್ಯ,
ರಾಮಚಂದ್ರ್, ಸಂಬಿಯಾರ್
ಪ್ರತಿ ದಿನ 3 ಆಟಗಳು

ಬೆಳಗಿನ ಪ್ರದರ್ಶನ 4–10–51 ರಿಂದ

ONE MILLION B. C.

ರಣಜಿತ್

ಅಮೋಘ 2 ನೇ ವಾರ

ಶಬಿನ್ತಾನ್

ಮನಮೋಹನ ಹಿಂದಿ ಚಿತ್ರ
ಪಾತ್ರ— ಕಣ್ಮಣಿಯಾದ ಶಾಂ,
ನಸೀಮ್, ಸಪ್ರೂ, ಕಕ್ಕೂ
ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 6–10–51 ರಿಂದ
ಮಿನಾ ನಾ ಬ ಜಾ ರ್

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಮೋತಿಲಾಲ್ 5–10–51 ರಿಂದ

ಬಡಿ ಬಹೂ

ನಿಮ್ಮಿ, ಶೇಖರ್, ಸುಲೋಚನಾ ಚಟರ್ಜಿ ಪಾತ್ರವಹಿಸಿರುವ
ಅಮೋಘ ಹಿಂದಿ ಚಿತ್ರ — ಪ್ರತಿ ದಿನ 3 ಆಟಗಳು
ಬೆಳಗಿನ ಪ್ರದರ್ಶನ 2-10-51 ರಿಂದ 7 ದಿನಗಳು
ಕಿಂಗ್ ಆಫ್ ದಿ ರಾಕೆಟ್ ಮೆನ್ (ರಿಪಬ್ಲಿಕ್ ಸೀರಿಯಲ್)

SHAKTI
SUDHA

A Superb Tonic

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1–14–0

For Quality Printing

L. N. Press

Sivarampet, Mysore

Edited, Printed and Published by Dharma Prachara Nirata M. S. Krishna Rao. at the Satyavadi Press Chamrajpuram Mysore